ಕರ್ನಾಟಕ ಸರ್ಕಾರ

# ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ


**ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-2**

**ದೂರವಾಣಿ: 080-22215072**


---

ಕಸಂನೃಅ/ಯುಸಂನೃಸ್ಪರ್ಧೆ / /2018-19 03.01.2019

## ಪತ್ರಿಕಾ ಪ್ರಕಟಣೆ

## ಯುವ ಸಂಗೀತ ನೃತ್ಯ ಸ್ಪರ್ಧೆ-2019

- - -

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಬೆಂಗಳೂರು ವತಿಯಿಂದ 2018-19ನೇ ಸಾಲಿನಲ್ಲಿ ರಾಜ್ಯ ಮಟ್ಟದ ಯುವ ಸಂಗೀತ ನೃತ್ಯ ಸ್ಪರ್ಧೆಯನ್ನು 2019 ಜನವರಿ 30 ಮತ್ತು 31 ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನದ ಆವರಣ, ಜೆ.ಸಿ.ರಸ್ತೆ, ಬೆಂಗಳೂರು ಇಲ್ಲಿ ಏರ್ಪಡಿಸಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸುವ ಆಸಕ್ತ ಯುವ ಸಂಗೀತ ಮತ್ತು ನೃತ್ಯ ಕಲಾವಿದರು ಬಿಳಿ ಹಾಳೆಯಲ್ಲಿ ತಮ್ಮ ಹೆಸರು, ವಿಳಾಸ, ಮೊಬೈಲ್ ನಂ. ವಯಸ್ಸು, ಭಾಗವಹಿಸುವ ಕಲಾಪ್ರಕಾರ, ಅಭ್ಯಾಸ ಮಾಡುತ್ತಿರುವ ಗುರುಗಳ ಪ್ರಮಾಣ ಪತ್ರ ಹಾಗೂ ಕಲಾವಿದರೊಬ್ಬರಿಂದ ಶಿಫಾರಸ್ಸು ಪತ್ರ ಹಾಗೂ ಈ ಕೆಳಕಂಡ ದಾಖಲಾತಿಗಳೊಂದಿಗೆ ದಿನಾಂಕ: 25.01.2019ರ ಒಳಗಾಗಿ ಅರ್ಜಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು - 2 ಇಲ್ಲಿಗೆ ಸಲ್ಲಿಸಬೇಕು. ಹೆಚ್ಚಿನ ವಿವರಕ್ಕಾಗಿ ಅಕಾಡೆಮಿ ದೂರವಾಣಿ ಸಂಖ್ಯೆ: 080-22215072 ಮೂಲಕ ಸಂಪರ್ಕಿಸಬಹುದು. ಹಾಗೂ ಅಕಾಡೆಮಿ ಅಂತರ್ಜಾಲ ತಾಣ karnatakasangeethanrithyaacademy.org ನೋಡಬಹುದು.

.

- ಸ್ಪರ್ಧೆಯಲ್ಲಿ ಭಾಗವಹಿಸಲು ವಯೋಮಿತಿ 18 ರಿಂದ 30 ವರ್ಷ ವಯೋಮಾನದ ಒಳಗಿರಬೇಕು. ಜನನ ಪ್ರಮಾಣ ಪತ್ರ ಲಗತ್ತಿಸಬೇಕು.
- ಅಕಾಡೆಮಿ ವ್ಯಾಪ್ತಿಯಲ್ಲಿ ಒಳಪಡುವ ಕಲಾ ಪ್ರಕಾರಗಳಿಗೆ ಸಂಬಂಧಿಸಿದಂತೆ ಆಯಾ ಕ್ಷೇತ್ರದಲ್ಲಿ 5 ವರ್ಷಗಳ ಸತತ ಅಭ್ಯಾಸ / ಶಿಕ್ಷಣ ಪಡೆದಿರಬೇಕು. ಹಾಗೂ ಗುರುಗಳಿಂದ ಪ್ರಮಾಣ ಪತ್ರ ತರಬೇಕು.
- ಸ್ಪರ್ಧೆಯಲ್ಲಿ ನೃತ್ಯದ ಅಭ್ಯರ್ಥಿಗಳು ಸಿ.ಡಿ.ಗಳನ್ನು ಬಳಸಬಹುದು.
- ಕರ್ನಾಟಕ ಸಂಗೀತ ಸ್ಪರ್ಧಿಗಳು ಮೃದಂಗ ಮತ್ತು ತಂಬೂರಿಯನ್ನು<br>ಹಿಂದೂಸ್ತಾನಿ ಸಂಗೀತ ಸ್ಪರ್ಧಿಗಳು ತಬಲಾ ಮತ್ತು ತಂಬೂರಿಯನ್ನು<br>ಸುಗಮ ಸಂಗೀತ ಸ್ಪರ್ಧಿಗಳು ತಬಲಾ ಮತ್ತು ತಂಬೂರಿಯನ್ನು ಬಳಸಬೇಕು
- ಅಕಾಡೆಮಿ ವ್ಯಾಪ್ತಿಗೆ ಒಳಪಡುವ ಕಲಾ ಪ್ರಕಾರಗಳಲ್ಲಿ ಕನಿಷ್ಠ 5 ಮಂದಿ ಸ್ಪರ್ಧಿಗಳಿರಬೇಕು.
- ಅಕಾಡೆಮಿ ವ್ಯಾಪ್ತಿಗೆ ಒಳಪಡುವ ಕಲಾಪ್ರಕಾರಗಳಿಗೆ ಸಂಬಂಧಿಸಿದಂತೆ, ಪ್ರತಿ ಕಲಾಕ್ಷೇತ್ರದಲ್ಲಿ ಪ್ರಥಮ ಬಹುಮಾನ ರೂ.10,000-00, ದ್ವಿತೀಯ ಬಹುಮಾನ ರೂ. 7,000-00 ಮೂರನೇ ಬಹುಮಾನ ರೂ. 3,000-00.
- ಗುರುಗಳ ಪ್ರಮಾಣಪತ್ರದೊಂದಿಗೆ ಹೆಸರಾಂತ ಕಲಾವಿದರೊಬ್ಬರಿಂದ ಶಿಫಾರಸ್ಸು ಪತ್ರವನ್ನು ಕಡ್ಡಾಯವಾಗಿ ತರಬೇಕಾಗುವುದು.

ಅಶೋಕ್ ಎನ್ ಚಲವಾದಿ<br>ರಿಜಿಸ್ಟ್ರಾರ್